

بسم اللهِ الرّحمٰن الرّحيم

# ಬಾಹ್ಯ ಮತ್ತು ಆಂತರಿಕ ಪಾಪ ಕೃತ್ಯಗಳಿಂದ ದೂರವಿದ್ದು ಅಲ್ಲಾಹನ ಸಾಮೀಪ್ಯ ಗಳಿಸಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ 11–03–2016 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

يَاأَيُّهَا الَّذِينَ آمَنُوا لاَ تَتَّبِعُوا خُطُوَاتِ الشَّيْطَانِ وَمَنْ يَتَّبِعْ خُطُوَاتِ الشَّيْطَانِ فَإِنَّهُ يَأْمُرُ بِالْفَحْشَاءِ وَالْمُنْكَرِ وَلَوْلاَ فَضْلُ اللَّهِ عَلَيْكُمْ وَرَحْمَتُهُ مَا زَكَا مِنْكُمْ مِنْ أَحَدٍ أَبَدًا وَلَكِنَّ اللَّهَ يُزَكِّي مَنْ يَشَاءُ وَاللَّهُ سَمِيعٌ عَلِيمٌ

**ಯಾ ಅಯ್ಯುಹಲ್ಲಝೀನ ಆಮನೂ ಲಾ ತತ್ತಬಿಊ ಖುತುವಾತಿಶ್ಶೈತಾನಿ ವಮನ್ ಯತ್ತಬಿಅ್ ಖುತುವಾತಿ ಶ್ಶೈತಾನಿ ಫ ಇನ್ನಹೂ ಯಅ್ಮುರು ಬಿಲ್‌ಫಹ್‌ಶಾಯಿ ವಲ್ ಮುಂಕರಿ ವ ಲೌಲಾ ಫಝ್ಲುಲ್ಲಾಹಿ ಅಲೈಹಿಂಕುಮ್ ವ ರಹ್ಮತುಹೂ ಮಾ ಝಕಾ ಮಿನ್‌ಕುಮ್ ಮಿನ್ ಅಹದಿನ್ ಅಬದನ್ ವಲಾ ಕಿನ್ನಲ್ಲಾಹ ಯುಝಕ್ಕೀ ಮನ್‌ಯಶಾಉ ವಲ್ಲಾಹು ಸಮೀಉನ್ ಅಲೀಮ್.**

“ಓ ಸತ್ಯವಿಶ್ವಾಸಿಗಳೇ, ಶೈತಾನನ ಹೆಜ್ಜೆಗಳನ್ನು ನೀವು ಅನುಗಮಿಸಬೇಡಿರಿ. ಶೈತಾನನ ಹೆಜ್ಜೆಗಳನ್ನು ಅನುಗಮಿಸುವವರು ತಿಳಿದುಕೊಳ್ಳಲಿ, ಖಂಡಿತವಾಗಿಯೂ ಅವನು ಅಶ್ಲೀಲತೆಯನ್ನೂ ಕೆಡುಕನ್ನೂ ಆದೇಶಿಸುತ್ತಾನೆ. ಅಲ್ಲಾಹನ ಅನುಗ್ರಹ ಮತ್ತು ಕರುಣೆ ನಿಮ್ಮ ಮೇಲೆ ಇಲ್ಲದಿರುತ್ತಿದ್ದರೆ ನಿಮ್ಮ ಪೈಕಿ ಯಾರೊಬ್ಬನೂ ಎಂದಿಗೂ ಪರಿಶುದ್ಧನಾಗುತ್ತಿರಲಿಲ್ಲ. ಆದರೆ, ಅಲ್ಲಾಹನು ತಾನಿಚ್ಛಿಸುವವರನ್ನು ಪರಿಶುದ್ಧರನ್ನಾಗಿ ಮಾಡುತ್ತಾನೆ. ಅಲ್ಲಹನು ಬಹಳವಾಗಿ ಆಲಿಸುವವನೂ ಸರ್ವಜ್ಞನೂ ಆಗಿದ್ದಾನೆ. (ಪವಿತ್ರ ಖುರ್‌ಆನ್ 24:22)

ಆರಂಭದಿಂದಲೂ ಶೈತಾನನು ಮನುಷ್ಯನ ಶತ್ರುವಾಗಿದ್ದಾನೆ. ಅವನು ಯಾವಾಗಲೂ ಶತ್ರುವಾಗಿಯೂ ಇರುವನು. ಶೈತಾನನಿಗೆ ಯಾವಾಗಲೂ ಜೀವಿಸಿರುವ ಶಕ್ತಿ ಇರುವುದರಿಂದ ಹೀಗೆ ಸಂಭವಿಸುವುದಲ್ಲ. ಮನುಷ್ಯನನ್ನು ಸೃಷ್ಟಿಸಿದಾಗ ಅಲ್ಲಾಹನು ಶೈತಾನನಿಗೆ ಸ್ವತಂತ್ರನಾಗಿ ವರ್ತಿಸುವ ಅಧಿಕಾರ ನೀಡಿದನು. ಏಕೆಂದರೆ ಅಲ್ಲಾಹನಿಗೆ ತಿಳಿದಿತ್ತು ತನ್ನ ಇಷ್ಟ ದಾಸರು ಶೈತಾನನ ಆಕ್ರಮಣಗಳಿಂದ ಸುರಕ್ಷಿತರಾಗಿರುವರು ಎಂದು. ಶೈತಾನನ ಶತ್ರುತ್ವ ಬಾಹ್ಯವಾಗಿ ಕಾಣುವಂತಹದಲ್ಲ. ಅವನು ಮುಂದೆ ಬಂದು ಹೋರಾಡುವುದಿಲ್ಲ. ಅವನು ವಿವಿಧ ಉಪಾಯಗಳಿಂದ, ಮೋಸ ವಂಚನೆಗಳಿಂದ, ಲೌಕಿಕ ಆಶೆ ಆಮಿಷಗಳ ಮೂಲಕ ಮನುಷ್ಯನ ಅಹಂಭಾವವನ್ನು ಉದ್ರೇಕಿಸುತ್ತಾನೆ ಮತ್ತು ಮನುಷ್ಯರನ್ನು ಒಳಿತುಗಳಿಂದ ದೂರ ಸರಿಸುತ್ತಾನೆ. ಕೆಡುಕುಗಳಿಗೆ ಸಮೀಪಗೊಳಿಸುತ್ತಾನೆ. ಶೈತಾನನು ಅಲ್ಲಾಹನೊಂದಿಗೆ ಹೀಗೆ ಹೇಳಿದ್ದನು: ನೀನು ಮನುಷ್ಯರನ್ನು ಎಂತಹ ಪ್ರಕೃತಿಯೊಂದಿಗೆ ಸೃಷ್ಟಿಸಿರುವೆ ಎಂದರೆ ಅವರು ಎರಡು ಕಡೆಗಳಿಗೂ ತಿರುಗಬಲ್ಲವರಾಗಿದ್ದಾರೆ. ಮನುಷ್ಯನಿಗೆ ಕೆಡುಕಿನ ಕಡೆಗೆ ಹೆಚ್ಚಿನ ಆಸಕ್ತಿ ಇರುವ ಕಾರಣ ನಾನು ಅವನನ್ನು ನನ್ನನ್ನು ಹಿಂಬಾಲಿಸುವಂತೆ ಮಾಡುವೆನು. ನೀನು ನನಗೆ ಅನುಮತಿ ನೀಡುವುದಾದರೆ ನಾನು ಪ್ರತಿಯೊಂದು ಮಾರ್ಗದಿಂದಲೂ ಅವನನ್ನು ಆಕ್ರಮಿಸುವೆನು. ಪ್ರತಿಯೊಂದು ಮಾರ್ಗದಿಂದ ಅವನು ದಾರಿ ತಪ್ಪುವಂತೆ ಮಾಡುವೆನು. ಆದರೆ ನಿನ್ನ ವಾಸ್ತವಿಕ ದಾಸರು, ನಿನ್ನ ನಿಷ್ಠಾವಂತರಾದ ದಾಸರು ನನ್ನ ಆಕ್ರಮಣಗಳಿಂದ ರಕ್ಷಿಸಲ್ಪಡುವರು. ಅವರ ಮೇಲೆ ನನ್ನ ಕುಟಿಲೋಪಾಯಗಳು ಯಾವ ಪ್ರಭಾವವನ್ನೂ ಬೀರಲಾರದು. ಇಂತಹ ಜನರ ಹೊರತು ಉಳಿದ ಬಹುತೇಕ ಜನರು ನನ್ನ ಹೆಜ್ಜೆ ಮೇಲೆ ಹೆಜ್ಜೆ ಹಾಕಿ ನಡೆಯುವರು.

ಅಲ್ಲಾಹನು ಶೈತಾನನಿಗೆ ಅನುಮತಿ ನೀಡಿದನು. ಆದರೆ ಅದರೊಂದಿಗೆ ಹೀಗೆ ಹೇಳಿದನು: ನಿನ್ನನ್ನು ಹಿಂಬಾಲಿಸುವ ಜನರನ್ನು ನಾನು ನರಕಕ್ಕೆ ಹಾಕುವೆನು. ಅಲ್ಲಾಹನು ಮನುಷ್ಯರಿಗೆ ಒಳಿತಿನ ಕಡೆಗೆ ಮಾರ್ಗದರ್ಶನ ನೀಡಲು ತನ್ನ ಪ್ರವಾದಿಗಳನ್ನು ಕಳುಹಿಸುವ ವ್ಯವಸ್ಥೆಯನ್ನೂ ಜಾರಿಗೊಳಿಸಿದನು. ಆ ಮೂಲಕ ಜನರಿಗೆ ತಮ್ಮನ್ನು ಸುಧಾರಣೆ ಮಾಡುವ ಮಾರ್ಗಗಳನ್ನು ತೋರಿಸಿ ಕೊಟ್ಟನು. ಜನರಿಗೆ ಇಹಲೋಕದಲ್ಲೂ ಪರಲೋಕದಲ್ಲೂ ಜೀವಿತವನ್ನು ಸರಿಪಡಿಸುವ ಮಾರ್ಗಗಳನ್ನು ಸಹ ತೋರಿಸಿಕೊಟ್ಟನು.

ಪವಿತ್ರ ಖುರ್‌ಆನ್‌ನಲ್ಲಿ ವಿವಿಧ ಸ್ಥಳಗಳಲ್ಲಿ ಅಲ್ಲಾಹನು ಶೈತಾನನ ಉಪಾಯಗಳಿಂದ ಮತ್ತು ಆಕ್ರಮಣಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಮುಂಜಾಗ್ರತೆ ವಹಿಸುವ ಬಗ್ಗೆ ಹೇಳಿದ್ದಾನೆ. ನಾನು ಪಠಿಸಿದ ವಚನದಲ್ಲಿ ಸಹ ಅಲ್ಲಾಹನು ಇದನ್ನೇ ಹೇಳಿದ್ದಾನೆ. ಅಲ್ಲಾಹನು ಪವಿತ್ರ ಖುರ್‌ಆನಿನ ಈ ವಚನದ ಕೊನೆಯಲ್ಲಿ ಸತ್ಯ ವಿಶ್ವಾಸಿಗಳಿಗೆ ಸಮಾಧಾನ ನೀಡಲು ಹೀಗೆ ಹೇಳಿದ್ದಾನೆ: ಅಲ್ಲಾಹನು **ಸಮೀಅ್** ಆಗಿದ್ದಾನೆ. ಬಹಳ ಆಲಿಸುವವನಾಗಿದ್ದಾನೆ ಎಂದು. ಆದುದರಿಂದ ಅವನನ್ನು ಸ್ಥಿರವಾಗಿ ಬೇಡುತ್ತಾ ಇರಬೇಕು. ಅವನ ಮುಂದೆ ಬಾಗುತ್ತಾ ಪ್ರಾರ್ಥಿಸುತ್ತಾ ಇರಬೇಕು. ಹೀಗೆ ಪ್ರಾರ್ಥಿಸುವ ಸತ್ಯವಿಶ್ವಾಸಿಯ ಹೃದಯದಲ್ಲಿ ಅಲ್ಲಾಹನು ಶೈತಾನನ ಆಕ್ರಮಣಗಳಿಂದ ರಕ್ಷಿಸಲ್ಪಡುವ ವಿಶ್ವಾಸದ ಶಕ್ತಿಯನ್ನು ಸೃಷ್ಟಿಸುವನು. ಆಗ ಅವನಿಗೆ ತನ್ನ ಒಳಿತಿನ ಮಟ್ಟವನ್ನು ಉನ್ನತಗೊಳಿಸುತ್ತಾ ಇರಲು ಭಾಗ್ಯ ಲಭಿಸುವುದು. ಕೆಡುಕಿನಿಂದ ತನ್ನನ್ನು ರಕ್ಷಿಸಿಕೊಳ್ಳುವ ಶಕ್ತಿ ಅವನಲ್ಲಿ ಉಂಟಾಗುವುದು.

ಅಲ್ಲಾಹನ ನಿಷ್ಠಾವಂತ ದಾಸನಾಗಲು ಪವಿತ್ರ ಖುರ್‌ಆನಿನ ಈ ವಚನದಲ್ಲಿ ಅಲ್ಲಾಹನು ಒಂದು ಉಪಾಯ ಸೂಚಿಸಿದ್ದಾನೆ. ಅಶ್ಲೀಲತೆಯಿಂದಲೂ ಕೆಡುಕಿನಿಂದಲೂ ಸತ್ಯವಿಶ್ವಾಸಿ ತನ್ನನ್ನು ರಕ್ಷಿಸಿಕೊಳ್ಳಬೇಕು. ಎಂದರೆ ನಿರರ್ಥಕವಾದ, ಅಲ್ಲಾಹನಿಗೆ ಅಪ್ರಿಯವಾದ ಕೆಲಸಗಳಿಂದ ತನ್ನನ್ನು ರಕ್ಷಿಸಿಕೊಳ್ಳಬೇಕು. ಆಗ ಅಲ್ಲಾಹನ ಅನುಗ್ರಹ ಮತ್ತು ಕರುಣೆ ಅವನನ್ನು ಪರಿಶುದ್ಧಿಗೊಳಿಸುವುದು. ಅಲ್ಲಾಹನು ಯಾರನ್ನು ಪರಿಶುದ್ಧಿಗೊಳಿಸುತ್ತಾನೋ ಅವನು ಪರಿಶುದ್ಧನಾಗುತ್ತಾನೆ. ಅಂತಹ ಪರಿಶುದ್ಧರ ಸಮೀಪಕ್ಕೆ ಶೈತಾನನು ಬರಲಾರನು.

ನಾವು ನೆನಪಿಡಬೇಕಾದುದೇನೆಂದರೆ ಶೈತಾನನ ಆಕ್ರಮಣ ಹಠಾತ್ತಾಗಿ ಸಂಭವಿಸುವುದಿಲ್ಲ. ಅವನು ಮೆಲ್ಲ ಮೆಲ್ಲಗೆ ಆಕ್ರಮಣ ಮಾಡುತ್ತಾನೆ. ಒಂದು ಚಿಕ್ಕ ಕೆಟ್ಟ ಕೆಲಸವನ್ನು ಮನುಷ್ಯನ ಹೃದಯದಲ್ಲಿ ಹಾಕಿ ಈ ಚಿಕ್ಕ ಕೆಡುಕಿನಿಂದ ಏನು ವ್ಯತ್ಯಾಸವಾಗುತ್ತದೆ ಎಂದು ಅವನಿಗೆ ಪ್ರೇರಣೆ ನೀಡುತ್ತಾನೆ. ಇದು ದೊಡ್ಡ ಪಾಪ ಕೃತ್ಯವೇನೂ ಅಲ್ಲವಲ್ಲ ಎಂದು ಯೋಚಿಸುವಂತೆ ಮಾಡುತ್ತಾನೆ. ಈ ಚಿಕ್ಕ ಚಿಕ್ಕ ಕೆಡುಕುಗಳೇ ಅನಂತರ ದೊಡ್ಡ ಪಾಪಕೃತ್ಯಗಳನ್ನು ಮಾಡುವಂತೆ ಪ್ರೇರೇಪಣೆ ನೀಡುತ್ತವೆ.

ಡಕಾಯಿತಿ ಮತ್ತು ಹತ್ಯೆಗಳೇ ಮಹಾ ಪಾತಕಗಳಲ್ಲ. ಸಮಾಜದ ನೆಮ್ಮದಿಯನ್ನು ಕೆಡಿಸುವ, ಅಶಾಂತಿ ಹಬ್ಬಿಸುವ ಪ್ರತಿಯೊಂದು ಕೆಟ್ಟ ಕೆಲಸ ಮಹಾ ಪಾತಕಗಳಾಗಿವೆ. ಮನುಷ್ಯನಿಗೆ ತಾನು ಮಾಡುವುದೇನೆಂಬುದರ ಬಗ್ಗೆ ಪ್ರಜ್ಞೆ ಅಳಿಸಿ ಹೋಗುತ್ತದೆ.

ಕೆಲವು ಜನರು ಹೀಗೆ ಯೋಚಿಸುತ್ತಾರೆ: ಅಲ್ಲಾಹನು ಶೈತಾನನನ್ನು ಸೃಷ್ಟಿಸಿದ್ದು ಏಕೆ ಎಂದು. ಅವನ ನಿರ್ಭಯ ಮನೋಭಾವವನ್ನು ಕಂಡು ಅವನಿಗೆ ಶಿಕ್ಷೆ ನೀಡಿ ಅವನನ್ನು ಮೊದಲೇ ಏಕೆ ನಾಶ ಮಾಡಲಿಲ್ಲ. ಶೈತಾನನನ್ನು ಮೊದಲ ದಿನವೇ ನಾಶಗೊಳಿಸಿದ್ದರೆ ಲೋಕದಲ್ಲಿ ಗಲಭೆ ಗೊಂದಲಗಳು ತಲೆದೋರುತ್ತಿರಲಿಲ್ಲ ಎಂದು ಕೆಲವರು ಯೋಚಿಸುತ್ತಾರೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಪ್ರತಿಯೊಬ್ಬ ಮನುಷ್ಯನಲ್ಲಿ ಎರಡು ರೀತಿಯ ಎಳೆಯುವ ಶಕ್ತಿಗಳಿವೆ ಎಂಬುದು ಎಲ್ಲರಿಗೂ ತಿಳಿದಿದೆ. ಒಂದು ಒಳಿತಿನ ಕಡೆಗೆ ಎಳೆಯುತ್ತದೆ. ಇನ್ನೊಂದು ಕೆಡುಕಿನ ಕಡೆಗೆ ಎಳೆಯುತ್ತದೆ. ಕೆಲವು ಸಾರಿ ಮನುಷ್ಯನ ಹೃದಯದಲ್ಲಿ ಕೆಡುಕಿನ ಯೋಚನೆಗಳು ಉಂಟಾಗುತ್ತವೆ. ಅವನು ಕೆಡುಕಿನ ಕಡೆಗೆ ಎಂತಹ ಒಲವನ್ನು ಹೊಂದುತ್ತಾನೆ ಎಂದರೆ ಅವನನ್ನು ಯಾರೋ ಕೆಡುಕಿನ ಕಡೆಗೆ ಎಳೆಯುವ ಹಾಗೆ ಭಾಸವಾಗುತ್ತದೆ. ಕೆಲವು ಸಾರಿ ಮನುಷ್ಯನ ಹೃದಯದಲ್ಲಿ ಒಳಿತಿನ ಯೋಚನೆಗಳು ಸ್ಫುರಿಸುತ್ತವೆ. ಆಗ ಅವನು ಒಳಿತಿನ ಕಡೆಗೆ ಒಲವನ್ನು ಹೊಂದುತ್ತಾನೆ. ಅವನನ್ನು ಯಾರೋ ಒಳಿತಿನ ಕಡೆಗೆ ಎಳೆಯುವ ಹಾಗೆ ತೋರುತ್ತದೆ. ಮತ್ತೆ ಕೆಲವು ಸಾರಿ ಮನುಷ್ಯನು ಕೆಟ್ಟ ಕೆಲಸ ಮಾಡಿದ ನಂತರ ಪುನಃ ಒಳಿತಿನ ಕಡೆಗೆ ತಿರುಗುತ್ತಾನೆ. ಅವನು ತಾನು ಮಾಡಿದ ಕೆಟ್ಟ ಕೆಲಸದ ಬಗ್ಗೆ ಬಹಳ ನಾಚಿಕೆ ಹೊಂದುತ್ತಾನೆ. ಕೆಲವು ಸಾರಿ ಹೀಗೆ ಆಗುತ್ತದೆ. ಒಬ್ಬನು ಇನ್ನೊಬ್ಬನಿಗೆ ಬೈಯ್ಯುತ್ತಾನೆ ಅಥವಾ ಹೊಡೆಯುತ್ತಾನೆ. ಅನಂತರ ಅದರ ಬಗ್ಗೆ ಅವನು ಪಶ್ಚಾತ್ತಾಪ ಪಡುತ್ತಾನೆ. ತಾನು ಬಹಳ ಕೆಟ್ಟ ಕೆಲಸ ಮಾಡಿದೆನು ಎಂದು ಯೋಚಿಸುತ್ತಾನೆ. ಹಾಗೆ ಅವನು ಕ್ಷಮೆ ಯಾಚಿಸುತ್ತಾನೆ ಮತ್ತು ಒಳ್ಳೆಯ ರೀತಿ ವರ್ತಿಸಲು ತೊಡಗುತ್ತಾನೆ.

ಮನುಷ್ಯನಲ್ಲಿರುವ ಈ ಎರಡು ಶಕ್ತಿಗಳನ್ನು ಇಲ್ಲ ಎಂದು ನೀವು ನಿರಾಕರಿಸಲಾರಿರಿ. ಈ ಎರಡು ಶಕ್ತಿಗಳನ್ನು **ರೂಹುಲ್ ಖುದ್‌ಸ್** ಮತ್ತು **ಶೈತಾನ್** ಎಂದು ಹೆಸರಿಸಬಹುದು. ಈ ಎರಡು ಶಕ್ತಿಗಳನ್ನು ಅಲ್ಲಾಹನು ಸೃಷ್ಟಿಸಿದುದರ ಉದ್ದೇಶ ಮನುಷ್ಯನು ತನ್ನ ಸತ್ಕರ್ಮಗಳಿಗೆ ಪ್ರತಿಫಲ ಪಡೆಯಲು ಅರ್ಹನಾಗಲಿಕ್ಕೋಸ್ಕರವಾಗಿದೆ. ಏಕೆಂದರೆ ಮನುಷ್ಯನು ಎಲ್ಲ ಪರಿಸ್ಥಿತಿಗಳಲ್ಲೂ ಒಳ್ಳೆಯದನ್ನೇ ಮಾಡುವ ಪ್ರಕೃತಿಯನ್ನು ಹೊಂದಿ ಒಳಿತನ್ನು ಮಾತ್ರ ಮಾಡಲು ನಿರ್ಬಂಧಿತನಾದರೆ ಮತ್ತು ಕೆಟ್ಟ ಕೆಲಸದ ಬಗ್ಗೆ ಪ್ರಕೃತಿ ಸಹಜವಾಗಿಯೇ ಜಿಗುಪ್ಸೆ ಹೊಂದುವವನಾಗಿದ್ದರೆ, ಅವನಿಗೆ ಅವನು ಮಾಡುವ ಒಳಿತುಗಳ ಫ಼ಲವಾಗಿ ಏನೂ ಪುಣ್ಯ ಲಭಿಸುತ್ತಿರಲಿಲ್ಲ. ಏಕೆಂದರೆ ಅದು ಅವನ ಪ್ರಕೃತಿ ಸಹಜವಾದ ಗುಣವಾಗಿರುತ್ತಿತ್ತು. ಆದರೆ ಮನುಷ್ಯನ ಪ್ರಕೃತಿ ಎರಡು ರೀತಿಯ ಆಕರ್ಷಣೆಗಳಿಗೆ ಪಾತ್ರವಾಗಿದ್ದರೆ ಮತ್ತು ಅವನು ಒಳಿತಿನ ಆಕರ್ಷಣೆ ಯನ್ನು ಅನುಗಮಿಸುವುದಾದರೆ, ಆಗ ಅವನಿಗೆ ಅವನ ಕೆಲಸದ ಪ್ರತಿಫಲ ದೊರಕುತ್ತದೆ. ನಿಸ್ಸಂಶಯವಾಗಿಯೂ ಮನುಷ್ಯನ ಹೃದಯಗಳಲ್ಲಿ ಎರಡು ರೀತಿಯ ಯೋಚನೆಗಳು ಉಂಟಾಗುತ್ತವೆ. ಒಳಿತಿನ ಮತ್ತು ಕೆಡುಕಿನ ಯೋಚನೆಗಳು. ಆದರೆ ಇವು ಮನುಷ್ಯನ ಸೃಷ್ಟಿಯ ಭಾಗಗಳಲ್ಲ.

ಯಾವುದರ ಕಡೆಗೆ ಶೈತಾನ್ ಕರೆಯುತ್ತಾನೆ, ಯಾರು ಶೈತಾನನ ಹೆಜ್ಜೆಗೆ ಹೆಜ್ಜೆ ಹಾಕಿ ನಡೆಯುತ್ತಾರೆ, ಮನುಷ್ಯನು ಯಾವುದನ್ನು ಗಳಿಸುವ ಮೂಲಕ ಶೈತಾನನ ಹೆಜ್ಜೆಯಲ್ಲಿ ನಡೆಯುವುದರಿಂದ ರಕ್ಷಿಸಿಕೊಳ್ಳಬಲ್ಲನು ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಶೈತಾನನು ಸುಳ್ಳು, ದೌರ್ಜನ್ಯ, ಭಾವನೆಗಳ ಹತ್ಯೆ, ಆಲಸ್ಯ ತೋರಿಕೆ, ಮತ್ತು ದುರಹಂಕಾರದ ಕಡೆಗೆ ಅಹ್ವಾನಿಸುತ್ತಾನೆ. ಇದಕ್ಕೆದುರಾಗಿ ಸದ್ಗುಣಗಳು, ಸಹನೆ, ದೇವಭಕ್ತಿ, ನಿಷ್ಠೆ, ಸತ್ಯ ವಿಶ್ವಾಸ ಮತ್ತು ಜಯದ ಕಡೆಗೆ ಅಲ್ಲಾಹನು ಅಹ್ವಾನಿಸುತ್ತಾನೆ. ಒಂದು ಕಡೆಯಿಂದ ಶೈತಾನನು ಆಹ್ವಾನಿಸುತ್ತಾನೆ. ಇನ್ನೊಂದು ಕಡೆಯಿಂದ ಅಲ್ಲಾಹನು ಅಹ್ವಾನಿಸುತ್ತಾನೆ. ಮನುಷ್ಯನು ಇವೆರಡು ಆಕರ್ಷಣೆಗಳ ಮಧ್ಯೆ ಇರುತ್ತಾನೆ. ಎರಡು ರೀತಿಯ ಸೆಳೆಯುವ ಶಕ್ತಿಗಳಿವೆ. ಇವುಗಳ ಮಧ್ಯೆ ಮನುಷ್ಯನು ಇರುತ್ತಾನೆ. ಯಾರ ಪ್ರಕೃತಿ ಉತ್ತಮವಾಗಿದೆಯೋ ಯಾರಲ್ಲಿ ಸಾತ್ವಿಕತೆ ಇದೆಯೋ ಅವನು ಶೈತಾನನ ಸಾವಿರಾರು ಆಹ್ವಾನಗಳನ್ನು ಮತ್ತು ಭಾವನೆಗಳನ್ನು ಎದುರಿಸುತ್ತಾನೆ. ಅವನ ಸಾತ್ವಿಕ ಪ್ರಕೃತಿಯ ಕಾರಣದಿಂದ ಅಲ್ಲಾಹನಿಂದ ಅನುಗ್ರಹ ಪಡೆದು ಅಲ್ಲಾಹನ ಕಡೆಗೆ ಓಡುತ್ತಾನೆ. ಅವನು ಶೈತಾನನ ಕಡೆಗೆ ಓಡುವುದಿಲ್ಲ. ಅವನು ಅಲ್ಲಾಹನಲ್ಲಿಯೇ ಸುಖವನ್ನೂ ಸಮಾಧಾನವನ್ನೂ ಪಡೆಯುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಪ್ರತಿಯೊಂದು ವಸ್ತುವಿಗೆ ಅದರ ಗುರುತಿನ ಚಿಹ್ನೆಗಳಿರುತ್ತವೆ. ಒಂದು ವಸ್ತುವಿನಲ್ಲಿ ಅದರ ಚಿಹ್ನೆಗಳು ಕಾಣುವ ತನಕ ಅದರ ಬಗ್ಗೆ ಖಾತರಿ ನೀಡಲಾಗದು. ಇದೇ ರೀತಿ ಸತ್ಯವಿಶ್ವಾಸಕ್ಕೆ ಚಿಹ್ನೆಗಳಿವೆ. ಮನುಷ್ಯನೊಳಗೆ ಸತ್ಯವಿಶ್ವಾಸ ಪ್ರವೇಶಿಸಿದರೆ ಅಲ್ಲಾಹನ ಮಹೋನ್ನತ ಸ್ಥಾನದ ಮಹಿಮೆ ಮತ್ತು **ಲಾ ಇಲಾಹ ಇಲ್ಲಲ್ಲಾಹ್** ಎಂಬುದರ ವಾಸ್ತವಿಕ ಅರ್ಥ ಅವನಲ್ಲಿ ಪ್ರವೇಶಿಸುತ್ತದೆ. ಅಲ್ಲಾಹನು ಅವನೊಳಗೆ ವಾಸಿಸಲು ತೊಡಗುತ್ತಾನೆ. ಆಗ ಶೈತಾನೀ ಜೀವಿತಕ್ಕೆ ಮೃತ್ಯು ಬಂದೆರಗುತ್ತದೆ. ಪಾಪದ ಬಗ್ಗೆ ಒಲವು ಮೃತವಾಗುತ್ತದೆ. ಇದು ಎಂತಹ ಭಾಗ್ಯವೆಂದರೆ ಸರಿಯಾದ ಸತ್ಯ ವಿಶ್ವಾಸವಿದ್ದರೆ ಪಾಪಕೃತ್ಯದ ಪ್ರಕೃತಿ ಸತ್ತು ಹೋಗುತ್ತದೆ. ಆಗ ಒಂದು ಹೊಸ ಜೀವನ ಪ್ರಾರಂಭವಾಗುತ್ತದೆ. ಅದು ಆಧ್ಯಾತ್ಮಿಕ ಜೀವಿತವಾಗಿರುತ್ತದೆ. ಅದು ಆಧ್ಯಾತ್ಮಿಕ ಜನನದ ಪ್ರಥಮ ದಿನವಾಗಿರುತ್ತದೆ. ಆಗ ಶೈತಾನೀ ಜೀವಿತಕ್ಕೆ ಮೃತ್ಯು ಸಂಭವಿಸುತ್ತದೆ. ಆಧ್ಯಾತ್ಮಿಕ ಜೀವಿತದ ಶಿಶು ಜನಿಸುತ್ತದೆ. ಅದು ಮನುಷ್ಯನು ಪುನಃ ಅಲ್ಲಾಹನಿಗೆ ಸೇರಿದವನಾಗುವ ಸಮಯವಾಗಿರುತ್ತದೆ.

ಎರಡು ಪಾಪ ಕೃತ್ಯಗಳು ಇದ್ದವು. ಒಂದು ಪಾಪ ಆದಮ್ ಮಾಡಿದರು. ಇನ್ನೊಂದು ಪಾಪವನ್ನು ಶೈತಾನನು ಮಾಡಿದನು. ಆದಮ್‌ರಲ್ಲಿ ದುರಾಹಂಕಾರವಿರಲಿಲ್ಲ. ಅವರು ಅಲ್ಲಾಹನ ಮುಂದೆ ತನ್ನ ಪಾಪ ಕೃತ್ಯದ ಬಗ್ಗೆ ಒಪ್ಪಿಕೊಂಡು ಕ್ಷಮೆ ಯಾಚಿಸಿದರು. ಅವರಿಗೆ ಕ್ಷಮೆ ದೊರಕಿತು. ಆದುದರಿಂದ ಮನುಷ್ಯನು ಪಶ್ಚಾತ್ತಾಪಗೊಂಡು ಕ್ಷಮೆ ಯಾಚಿಸುವ ಮೂಲಕ ತನ್ನ ಪಾಪಕೃತ್ಯ ಕ್ಷಮಿಸಲ್ಪಡುವ ಪ್ರತೀಕ್ಷೆ ಹೊಂದಿರುತ್ತಾನೆ. ದುರಹಂಕಾರ ತೋರಿಸದೆ, ಪಾಪ ಕೃತ್ಯಗಳನ್ನು ಒಪ್ಪಿಕೊಂಡು ತೌಬ ಪ್ರಾರ್ಥನೆ ಮಾಡಿದರೆ ಅಲ್ಲಾಹನು ಕ್ಷಮಿಸುವನೆಂಬ ಪ್ರತೀಕ್ಷೆ ಇರುತ್ತದೆ. ಆದರೆ ಶೈತಾನನು ದುರಹಂಕಾರ ಪ್ರಕಟಿಸಿದನು. ಆದುದರಿಂದ ಅವನು ಶಪಿಸಲ್ಪಟ್ಟನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ದುರಹಂಕಾರಿಯಾದ ಮನುಷ್ಯನು ತನ್ನಲ್ಲಿ ಇಲ್ಲದುದನ್ನು ತನ್ನಲ್ಲಿ ಇದೆ ಎಂದು ಹೇಳುತ್ತಾನೆ. ಎಲ್ಲ ಅಹಂಭಾವಗಳಿಗೆ ಅರ್ಹನು ಅಲ್ಲಾಹನು ಮಾತ್ರ. ದುರಹಂಕಾರದಿಂದ ವರ್ತಿಸದೆ ವಿನಯದಿಂದ

ವರ್ತಿಸುವ ಜನರು ನಾಶವಾಗಲಾರರು. ಆದುದರಿಂದ ನೀವು ಅಹಂಭಾವದಿಂದ ವರ್ತಿಸಬೇಡಿರಿ.

ಸತ್ಯವಿಶ್ವಾಸಿ ಇಂತಹ ವೈಶಿಷ್ಟ್ಯಗಳನ್ನು ಹೊಂದಬೇಕು. ಹೀಗೆ ಮಾಡದಿದ್ದರೆ ಶೈತಾನನ ಹೆಜ್ಜೆಗಳನ್ನು ಅನುಗಮಿಸುವವನಾಗುವನು. ದುರಹಂಕಾರ ಮನುಷ್ಯನಿಗೆ ಕೆಲವು ಸಾರಿ ತಿಳಿಯುವುದಿಲ್ಲ. ಆದುದರಿಂದ ಅದರ ಬಗ್ಗೆ ಸೂಕ್ಷ್ಮ ಪರಿಶೋಧನೆ ನಡೆಸಬೇಕು. ಶೈತಾನನು ಯಾವ ರೀತಿ ಮನುಷ್ಯನನ್ನು ತನ್ನ ಹಿಡಿತಕ್ಕೆ ತರಲು ಪ್ರಯತ್ನಿಸುತ್ತಾನೆ ಎನ್ನುವುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ಮನುಷ್ಯನ ಕೃತ್ಯಗಳಿಂದ ಪಾಪ ದೂರ ಸರಿದಿದ್ದರೆ, ಅವನು ಪಾಪ ಕೃತ್ಯ ಮಾಡದಿದ್ದರೆ, ಶೈತಾನನು ಅಂತಹ ಮನುಷ್ಯನ ಕಣ್ಣು, ಕಿವಿ ಮತ್ತು ಮೂಗಿನ ಮೂಲಕ ಪಾಪ ಕೃತ್ಯ ಮಾಡಿಸಲು ಬಯಸುತ್ತಾನೆ. ಅಲ್ಲಿ ಕುಳಿತು ಸಹ ಶೈತಾನನಿಗೆ ತನ್ನ ಕೆಲಸ ಮಾಡಲು ಸಾಧ್ಯವಾಗದಿದ್ದರೆ ಅವನು ಹೃದಯದಲ್ಲಿ ಕುಳಿತಿರಲು ಪ್ರಯತ್ನಿಸುತ್ತಾನೆ. ಕೆಲವು ಜನರಿಗೆ ಪಾಪ ಕೃತ್ಯ ಮಾಡುವ ಸಂದರ್ಭ ಸಿಗುವುದಿಲ್ಲ. ಅಥವಾ ಅವರು ಭಯದ ಕಾರಣ ಪಾಪ ಕೃತ್ಯ ಮಾಡುವುದಿಲ್ಲ. ಇಂತಹ ಜನರು ಬಾಹ್ಯವಾಗಿ ಪಾಪ ಕೃತ್ಯ ಮಾಡುವುದಿಲ್ಲ. ಇಂತಹ ಮನುಷ್ಯನು ಅಲ್ಲಾಹನ ಜೊತೆ ಸಂಬಂಧ ಸ್ಥಾಪಿಸದಂತೆ ಶೈತಾನನು ಮಾಡುತ್ತಾನೆ. ಶೈತಾನನು ಯಾವುದಾದರೂ ರೀತಿಯಲ್ಲಿ ಅವರೊಳಗೆ ಪಾಪದ ಬೀಜವನ್ನು ಬಿತ್ತಲು ಪ್ರಯತ್ನಿಸುತ್ತಾನೆ. ಅವನು ಅವರ ಹೃದಯದಲ್ಲಿ ಕುಳಿತಿರುತ್ತಾನೆ. ಆದರೆ ಯಾವ ಹೃದಯದಲ್ಲಿ ಅಲ್ಲಾಹನ ಭಯವಿದೆಯೋ ಅಲ್ಲಿ ಶೈತಾನನ ಅಧಿಕಾರ ಚಲಾಯಿಸಲ್ಪಡುವುದಿಲ್ಲ.

ಆದುದರಿಂದ ಮುಖ್ಯವಾದುದು ಅಲ್ಲಾಹನ ಭಯ ಮನುಷ್ಯನ ಹೃದಯದಲ್ಲಿರಬೇಕಾಗಿದೆ. ಅಲ್ಲಾಹನ ಭಯ ಹೃದಯದಲ್ಲಿ ಹೊಂದಿದ್ದರೆ ಮನುಷ್ಯನು ಬಹುತೇಕ ಪಾಪ ಕೃತ್ಯಗಳಿಂದ ತನ್ನನ್ನು ರಕ್ಷಿಸಬಲ್ಲನು. ಒಬ್ಬ ಕಳ್ಳ ಕದಿಯುವಾಗ ಒಂದು ಮಗು ತನ್ನನ್ನು ನೋಡುವುದಾಗಿ ತಿಳಿದರೆ ಸಹ ಅವನಿಗೆ ಆ ಮಗುವಿನ ಬಗ್ಗೆ ಭಯ ಉಂಟಾಗುತ್ತದೆ. ನಮ್ಮ ಪ್ರತಿಯೊಂದು ಕೆಲಸ ಅಲ್ಲಾಹನು ನೋಡುತ್ತಾನೆ ಎಂದು ಪ್ರಜ್ಞೆ ಹುಟ್ಟುವ ತನಕ ಮನುಷ್ಯನು ತನ್ನನ್ನು ಪಾಪ ಕೃತ್ಯಗಳಿಂದ ರಕ್ಷಿಸಿಕೊಳ್ಳಲಾರನು. ಮನುಷ್ಯನ ಜೊತೆಗೆ ಎರಡು ಶಕ್ತಿಗಳು ಯಾವಾಗಲೂ ಇರುತ್ತವೆ. ಒಂದು ದೇವದೂತನ ಶಕ್ತಿ ಇನ್ನೊಂದು ಶೈತಾನನ ಶಕ್ತಿ. ಮನುಷ್ಯನ ಕಾಲುಗಳಲ್ಲಿ ಎರಡು ಹಗ್ಗಗಳಿವೆ. ದೇವದೂತರು ಒಳಿತು ಬಗ್ಗೆ ಪ್ರೇರಣೆ ಮತ್ತು ಸಹಾಯ ನೀಡುತ್ತಾರೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: **ಅಯ್ಯದಹುಮ್ ಬಿ ರೂಹಿನ್ ಮಿನ್‌ಹು,** ಎಂದರೆ ಅಲ್ಲಾಹನು ತನ್ನ ವಚನದ ಮೂಲಕ ಅವರಿಗೆ ಸಹಾಯ ನೀಡಿದನು ಎಂದು.

ಅದೇರೀತಿ ಶೈತಾನನು ಕೆಡುಕಿನ ಬಗ್ಗೆ ಪ್ರೇರೇಪಣೆ ನೀಡುತ್ತಾನೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: **ಯುವಸ್‌ವಿಸು** ಶೈತಾನನು ಹೃದಯಗಳಲ್ಲಿ ಸಂಶಯವನ್ನು ಮೂಡಿಸುತ್ತಾನೆ. ಇವೆರಡು ಶಕ್ತಿಗಳ ಅಸ್ತಿತ್ವವನ್ನು ನಿರಾಕರಿಸಲು ಸಾಧ್ಯವಿಲ್ಲ. ಬೆಳಕು ಮತ್ತು ಅಂಧಕಾರ ಒಟ್ಟೊಟ್ಟಿಗೆ ಇರುತ್ತವೆ.

ಶೈತಾನನು ಯಾವ ರೀತಿ ಪ್ರೇರೇಪಿಸುತ್ತಾನೆ ಎನ್ನುವ ಬಗ್ಗೆ ಇದರ ಮೊದಲು ಒಂದು ಉದಾಹರಣೆ ನೀಡಲಾಗಿದೆ. 'ಶ್ರೀಮಂತರು ನಮ್ಮ ಆವಶ್ಯಕತೆ ಈಡೇರಿಸುವರು ಹಾಗೂ ಅಲ್ಲಾಹನ ಹೊರತು ನಮ್ಮ ಆವಶ್ಯಕತೆಗಳನ್ನು ಈಡೇರಿಸಬಲ್ಲ ಬೇರೆ ಶಕ್ತಿಗಳು ಸಹ ಇವೆ' ಎಂಬ ಯೋಚನೆಯಿಂದ ರಕ್ಷಿಸಿಕೊಳ್ಳುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇದಕ್ಕಾಗಿ ಯಾವಾಗಲೂ ಯಥಾರ್ಥ **ರಬ್ಬುನ್ನಾಸ್** (ಮನುಷ್ಯನ ಪ್ರಭು) ಅವನ ಆಶ್ರಯದಲ್ಲಿ ಇರುವ ಪ್ರಾರ್ಥನೆ ಮಾಡಬೇಕು. ಲೌಕಿಕ ದೊರೆಗಳನ್ನೂ ಅಧಿಕಾರಿಗಳನ್ನೂ ಮನುಷ್ಯನು ಸರ್ವಾಧಿಕಾರಿಗಳೆಂದು ಭಾವಿಸಬಾರದು. **ಮಲಿಕಿನ್ನಾಸ್** (ಮನುಷ್ಯರ ಸಾರ್ವಭೌಮ) ಆಗಿರುವ ಅಲ್ಲಾಹನ ಆಶ್ರಯ ಬೇಡಬೇಕು. ಕೆಲವರು ಮನುಷ್ಯರನ್ನು ದೇವರಿಗೆ ಸಮಾನವಾಗಿ ಭಾವಿಸಿ ಅವರಿಗೆ ಭಯಪಡುತ್ತಾರೆ. ಅದಕ್ಕಾಗಿ **ಇಲಾಹಿನ್ನಾಸ್** (ಮನುಷ್ಯರ ಆರಾಧ್ಯ ದೇವನ) ಆಶ್ರಯವನ್ನು ಬೇಡಲು ಆಜ್ಞಾಪಿಸಲಾಗಿದೆ. ಮನುಷ್ಯನಲ್ಲಿ ತಲೆದೋರಬಹುದಾದ ಈ ಮೂರು ದುಶ್ಚಿಂತೆಗಳ ನಿವಾರಣೆ ಪವಿತ್ರ ಖುರ್‌ಆನಿನ **ಸೂರತುನ್ನಾಸ್**ನಲ್ಲಿ ಪ್ರಾರ್ಥನೆ ಕಲಿಸಲಾಗಿದೆ. ಈ ದುಶ್ಚಿಂತನೆಗಳನ್ನು ಉಂಟುಮಾಡುವವನು **ಖನ್ನಾಸ್** ಅಥವಾ **ಶೈತಾನನೇ** ಆಗಿದ್ದಾನೆ.

ಎಲ್ಲ ಸಂದರ್ಭಗಳಲ್ಲೂ ಧರ್ಮಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡಬೇಕೆಂಬ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಎರಡು ರೀತಿಯ ಜನರಿದ್ದಾರೆ. ಒಂದು ವಿಭಾಗದ ಜನರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ನಂತರ ತಮ್ಮ ಲೌಕಿಕ ಕೆಲಸಗಳಲ್ಲೂ ವ್ಯಾಪಾರದಲ್ಲೂ ತಲ್ಲೀನರಾಗುತ್ತಾರೆ. ಶೈತಾನ್ ಅವರ ತಲೆಯ ಮೇಲಿರುತ್ತಾನೆ. ನಾನು ಹೇಳುವುದರ ಅರ್ಥ ವ್ಯಾಪಾರ ಮಾಡಬಾರದು ಎಂದಲ್ಲ. ಸಹಾಬರು ಸಹ ವ್ಯಾಪಾರ ಮಾಡುತ್ತಿದ್ದರು. ಆದರೆ ಧರ್ಮಕ್ಕೆ ಆದ್ಯತೆ ನೀಡುತ್ತಿದ್ದರು. ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದಾಗ ಇಸ್ಲಾಮಿನ ಬಗ್ಗೆ ಪೂರ್ಣ ಜ್ಞಾನಗಳಿಸಿದರು. ಆದುದರಿಂದ ಅವರು ಯಾವ ಸಂದರ್ಭದಲ್ಲೂ ಶೈತಾನನ ಆಕ್ರಮಣಗಳಿಂದ ಕಂಗೆಡಲಿಲ್ಲ. ಸತ್ಯವನ್ನು ಪ್ರಕಟಿಸುವುದರಿಂದ ಅವರನ್ನು ಯಾವುದೂ ತಡೆಯಲಿಲ್ಲ.

ಆದುದರಿಂದ ನಾವು ಎಂತಹ ವ್ಯಾಪಾರ ಮಾಡಬೇಕೆಂದರೆ ಅಲ್ಲಾಹನಿಂದ ನಿಯೋಗಿಸಲ್ಪಟ್ಟ ಮಹ್‌ದೀ ಮಸೀಹ್ ಆಗಿರುವ ನಮ್ಮ ಇಮಾಮರು ನಮ್ಮನ್ನು ಯಾವುದರ ಕಡೆಗೆ ಆಹ್ವಾನಿಸುತ್ತಿದ್ದರೋ ಅದರ ಪ್ರಕಾರ ನಾವು ವರ್ತಿಸಬೇಕು. ಹಾಗೆ ನಾವು ಶೈತಾನನ ಹೆಜ್ಜೆಗೆ ಹೆಜ್ಜೆ ಹಾಕಿ ನಡೆಯುವುದರಿಂದ ರಕ್ಷಣೆ ಪಡೆಯಬೇಕು. ಅಲ್ಲಾಹನ ಸಂಪ್ರೀತಿ ಗಳಿಸಿ ವೇದನಾ ಜನಕ ಶಿಕ್ಷೆಯಿಂದ ರಕ್ಷಣೆ ಪಡೆಯಬೇಕು.

ರಹಸ್ಯ ಪಾಪಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ ಎನ್ನುವ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಮನುಷ್ಯನು ಕೆಲವೊಮ್ಮೆ ಕಷ್ಟಕ್ಕೆ ಗುರಿಯಾಗುವುದಿದ್ದರೆ ಅದಕ್ಕೆ ಕಾರಣ ಮನುಷ್ಯನ ತಪ್ಪುಗಳೇ ಆಗಿರುತ್ತವೆ. ಕಷ್ಟಕ್ಕೆ ಗುರಿಯಾದಾಗ ಅಲ್ಲಾಹನಿಂದ ಕಷ್ಟ ಸಂಭವಿಸಿತು ಎಂದು ಹೇಳುವುದು ತಪ್ಪು. ತಪ್ಪು ಮನುಷ್ಯನದೇ ಆಗಿರುತ್ತದೆ. ಅಲ್ಲಾಹನು ತಪ್ಪು ಮಾಡುವುದಿಲ್ಲ. ಕೆಲವು ಜನರು ಬಾಹ್ಯವಾಗಿ ಸಾತ್ವಿಕರಾಗಿರುತ್ತಾರೆ. ಅಂತಹ ಮನುಷ್ಯನಿಗೆ ಕಷ್ಟ ಏಕೆ ಸಂಭವಿಸಿತು ಎಂದು ಜನರು ಆಶ್ಚರ್ಯಗೊಳ್ಳುತ್ತಾರೆ. ವಾಸ್ತವಿಕವಾಗಿ ಅವರಲ್ಲಿ ರಹಸ್ಯ ಪಾಪಗಳಿರುತ್ತವೆ. ಅವು ಅವರನ್ನು ಅಂತಹ ಸ್ಥಿತಿಗೆ ತಲಪಿಸಿವೆ. ಅಲ್ಲಾಹನು ಬಹಳ ಕ್ಷಮಿಸುವವನಾಗಿದ್ದಾನೆ. ಪಾಪಗಳನ್ನು ಕಡೆಗಣಿಸುತ್ತಾನೆ. ಆದುದರಿಂದ ಮನುಷ್ಯನ ರಹಸ್ಯ ಪಾಪದ ಬಗ್ಗೆ ಯಾರಿಗೂ ತಿಳಿದಿರುವುದಿಲ್ಲ. ಯಥಾರ್ಥದಲ್ಲಿ ರಹಸ್ಯ ಪಾಪಗಳು ಬಹಿರಂಗ ಪಾಪಗಳಿಗಿಂತ ಕೆಟ್ಟದಾಗಿರುತ್ತವೆ. ಪಾಪಗಳು ಸಹ ರೋಗಗಳ ಹಾಗಿರುತ್ತವೆ. ಕೆಲವೊಮ್ಮೆ ರೋಗಗಳು ಬಾಹ್ಯವಾಗಿ ಕಾಣಿಸುತ್ತವೆ. ಆದರೆ ರಹಸ್ಯ ರೋಗಗಳು

ಹೇಗಿವೆ ಎಂದರೆ ರೋಗಿಯ ತಿಳುವಳಿಕೆಗೂ ಸಹ ಅವು ಬರುವುದಿಲ್ಲ. ಉದಾಹರಣೆಗೆ ಕ್ಷಯ ರೋಗ ನೋಡಿರಿ. ಅದರ ಬಗ್ಗೆ ವೈದ್ಯರಿಗೆ ಸಹ ಆರಂಭದಲ್ಲಿ ತಿಳಿಯುವುದಿಲ್ಲ. ರೋಗ ಉಲ್ಬಣಿಸಿದಾಗ, ಅಪಾಯಕರವಾದಾಗ ಮಾತ್ರ ತಿಳಿಯುತ್ತದೆ. ಕೆಲವು ಸಾರಿ ಕೊನೆಯ ಹಂತದಲ್ಲಿ ಮಾತ್ರ ತಿಳಿಯುತ್ತದೆ. ಅದೇರೀತಿ ಕ್ಯಾನ್ಸರ್ ರೋಗಿಗಳನ್ನು ನೋಡಿರಿ. ಅವರು ಆರೋಗ್ಯವಂತರಾಗಿ ಕಾಣಿಸುತ್ತಾರೆ. ಫಕ್ಕನೆ ಕ್ಯಾನ್ಸರ್ ಬಗ್ಗೆ ತಿಳಿಯುತ್ತದೆ. ಆಗ ಅದು ಚಿಕಿತ್ಸೆ ಫಲಕಾರಿಯಾಗದ ಸ್ಥಿತಿಗೆ ತಲಪಿರುತ್ತದೆ. ಕ್ಯಾನ್ಸರ್ ಹರಡಿ ಕೆಲವು ತಿಂಗಳಲ್ಲಿ ರೋಗಿ ಸಾಯುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನ ರೋಗದ ಬಗ್ಗೆ ತಿಳಿಯದ ಹಾಗೆಯೇ ಆಂತರಿಕ ಪಾಪದ ಬಗ್ಗೆ ಸಹ ತಿಳಿಯುವುದಿಲ್ಲ. ಅದು ಕ್ರಮೇಣ ನಾಶಕ್ಕೆ ಒಯ್ಯುತ್ತದೆ. ಅಲ್ಲಾಹನು ತನ್ನ ಅನುಗ್ರಹದಿಂದ ದಯೆದೋರಲಿ– ಆಮೀನ್. ಪವಿತ್ರ ಖುರ್‌ಆನ್ ಹೇಳುತ್ತದೆ: **ಖದ್ ಅಫ್‌ಲಹ ಮನ್ ಝುಕ್ಕಾಹಾ.** ತನ್ನ ಆತ್ಮವನ್ನು ಪರಿಶುದ್ಧಗೊಳಿಸಿದವನು ಜಯಶಾಲಿಯಾದನು. ಆತ್ಮ ಶುದ್ಧೀಕರಣ ಸಹ ಒಂದು ಮೃತ್ಯುವಾಗಿದೆ. ಎಲ್ಲ ದುರ್ಗುಣಗಳನ್ನು ತ್ಯಜಿಸದೆ ಆತ್ಮ ಶುದ್ಧಿಗಳಿಸುವುದು ಹೇಗೆ ಸಾಧ್ಯ? ಕೆಟ್ಟ ಸ್ವಭಾವ ಗುಣಗಳನ್ನು ತ್ಯಜಿಸಬೇಕು. ಶೈತಾನನು ಅಶ್ಲೀಲ ಮತ್ತು ದುರ್ಗುಣಗಳನ್ನು ಚಲಾಯಿಸಲು ಬಯಸುತ್ತಾನೆ. ದುರ್ಗುಣಗಳನ್ನು ತ್ಯಜಿಸದೆ ಆತ್ಮ ಪರಿಶುದ್ಧಿ ಲಭಿಸಲಾರದು.

ಪ್ರತಿಯೊಬ್ಬನಲ್ಲಿ ಯಾವುದಾದರೊಂದು ಕೆಡುಕು ಇರುತ್ತದೆ. ಅದು ಅವನ ಶೈತಾನ್ ಆಗಿರುತ್ತದೆ. ಅದನ್ನು ಹತ್ಯೆ ಮಾಡದೆ ಕಾರ್ಯ ಸಾಗದು. ನಾನು ಹಿಂದೆ ಹೇಳಿದ ಹಾಗೆ ಯಾವಾಗಲೂ ನಾವು ಅಲ್ಲಾಹನ ಆಶ್ರಯ ಬೇಡಬೇಕು. ನಮ್ಮ ಕರ್ಮಗಳನ್ನು ಪರಿಶೋಧಿಸಬೇಕು. ಶೈತಾನನನ್ನು ಕೊಲ್ಲುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರವಾದಿಗಳು ದೇವತ್ವವನ್ನು ಪ್ರಕಟಿಸುವವರೂ ದೇವನ ಪ್ರತಿನಿಧಿಗಳೂ ಆಗಿರುತ್ತಾರೆ. ಓರ್ವ ಯಥಾರ್ಥ ಮುಸ್ಲಿಮ್ ಪ್ರವಾದಿಯನ್ನು ಪ್ರಕಟಿಸುವವನಾಗಬೇಕು. ಸಹಾಬರು ಈ ರಹಸ್ಯ ಚೆನ್ನಾಗಿ ತಿಳಿದಿದ್ದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಸರಣೆಯಲ್ಲಿ ಹೇಗೆ ತಲ್ಲೀನರಾದರೆಂದರೆ ಅವರ ಸ್ವಂತ ಅಸ್ತಿತ್ವವೇ ಇರಲಿಲ್ಲ. ಅವರನ್ನು ನೋಡಿದವರು ಅವರನ್ನು ದೇವ ಪರವಶರಾಗಿ ಕಾಣುತ್ತಿದ್ದರು. ಅವರು ಅಲ್ಲಾಹನ ಸಾಮೀಪ್ಯ ಪಡೆಯಲು ಮತ್ತು ಹಝ್ರತ್ ಪೈಗಂಬರರ(ಸ) ಸ್ವಭಾವ ಗುಣಗಳನ್ನು ಹೊಂದುವುದರಲ್ಲಿ ಮುಳುಗಿದ್ದರು. ಈ ಕಾಲದಲ್ಲಿ ಸಹ ಸಹಾಬರ ಹಾಗಿರುವ ಗುಣವನ್ನು ಹೊಂದುವ ತನಕ ನೀವು ನನ್ನನ್ನು ನಂಬಿದವರಲ್ಲಿ ಸೇರಿರುವುದಾಗಿ ಮಾಡುವ ವಾದವು ಸತ್ಯವಾಗಲಾರದು. ನೀವು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ, ಅಲ್ಲಾಹನು ನಿಮ್ಮೊಳಗೆ ವಾಸಿಸಲು ತೊಡಗುವ ತನಕ ಮತ್ತು ಅದರ ಚಿಹ್ನೆಗಳು ನಿಮ್ಮಲ್ಲಿ ಕಾಣಿಸುವ ತನಕ ಶೈತಾನನ ಅಧಿಕಾರ ಚಲಾವಣೆ ನಿಮ್ಮಲ್ಲಿ ಜಾರಿಯಲ್ಲಿರುವುದು.

ನಾವು ಅಲ್ಲಾಹನ ಯಥಾರ್ಥ ದಾಸರಾಗಲು ಪ್ರಯತ್ನ ಮಾಡುವ ಭಾಗ್ಯ ಅಲ್ಲಾಹನು ನಮಗೆ ನೀಡಲಿ. ನಾವು ಎಲ್ಲ ಅಶ್ಲೀಲತೆಗಳಿಂದಲೂ ಕೆಡುಕಿನಿಂದಲೂ ದುರಹಂಕಾರಗಳಿಂದಲೂ ರಕ್ಷಣೆ ಪಡೆಯುವಂತೆ ಅಲ್ಲಾಹನು ಮಾಡಲಿ. ನಾವು ಆತ್ಮ ಪರಿಶುದ್ಧಿಗೆ ಪ್ರಯತ್ನ ಮಾಡುತ್ತಾ ಇರುವವರಾಗಲಿ. ಮತ್ತು ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರರಾಗುವಂತೆ ಅವನು ಮಾಡಲಿ. ನಾವು ಯಾವಾಗಲೂ ಅಲ್ಲಾಹನ ಕಡೆಗೆ ದೃಷ್ಟಿಸುವವರಾಗೋಣ. ಅವನೇ ನಮ್ಮ ಪ್ರಭುವಾಗಿದ್ದಾನೆ. ಅವನ ದೊರೆತನ ನಮ್ಮ ಹೃದಯಗಳ ಮೇಲೆ ಸ್ವಾಧೀನ ಹೊಂದಲಿ. ಅವನೇ ನಮ್ಮ ಆರಾಧ್ಯನಾಗಲಿ. ನಾವು ಯಾವಾಗಲೂ ಅವನನ್ನೇ ಕರೆಯುವವರಾಗೋಣ. ನಾವು ಶೈತಾನನ ಹೆಜ್ಜೆಗೆ ಹೆಜ್ಜೆ ಹಾಕಿ ನಡೆಯುವುದರಿಂದ ರಕ್ಷಣೆ ಪಡೆಯುವವರಾಗೋಣ. ಅಲ್ಲಾಹನು ನಮಗೆ ಆ ರೀತಿ ಮಾಡುವ ಭಾಗ್ಯ ದಯಪಾಲಿಸಲಿ – ಆಮೀನ್.

——————————*****——————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 11-03-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon